Review Of Research
ISSN:-2249-894X
Impact Factor : 3.1402(UIF)
Vol. 4 | Issue. 4 | Jan. 2015
Available online at www.lbp.world

# ಗುಲ್ಬರ್ಗಾ ಜಿಲ್ಲೆಯ ಸಂಗೀತ – ಒಂದು ಅವಲೋಕನ

**ಸಂಶೋಧಕರು**
ಶ್ರೀಮತಿ. ರೇಣುಕಾ ಹಾಗರಗುಂಡಗಿ , ಉಪನ್ಯಾಸಕರು ಸಂಗೀತ ವಿಭಾಗ ,
ಶ್ರೀಮತಿ. ವಿ.ಜಿ ಪದವಿ ಮಹಿಳಾ ಮಹಾವಿದ್ಯಾಲಯ ಗುಲ್ಬರ್ಗಾ.

ಹೈದ್ರಾಬಾದ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯು ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ಜಾನಪದ, ತತ್ವಪದ, ಸೂಫಿ ಸಂಗೀತ ಗಝಲ್ ಹೀಗೆ ನಾನಾ ಕಲೆಗಳ ಸಂಗಮವೇ ಆಗಿದೆ. ಇಲ್ಲಿ ಜಾತಿಮತಗಳ ಭೇದವಿಲ್ಲದೆ ಎಲ್ಲ ಜನಸಾಮಾನ್ಯರು ವಚನಗಳನ್ನು ಹೇಳುತ್ತಾ ಜಾನಪದ ಹಾಡುಗಳನ್ನು ಹಾಡುತ್ತಾ ಹಾಡಿನ ಸೊಗಡನ್ನು ಎತ್ತಿ ಹಿಡಿದಿದ್ದಾರೆ. ಸಂಗೀತ, ಚಿತ್ರಕಲೆ ಕೇವಲ ಮನೊರಂಜನೆಗಾಗಿ ಬಳಸದೆ ಶಾಲಾ ಕಾಲೇಜುಗಳಲ್ಲಿ ಒಂದು ವಿಷಯವನ್ನಾಗಿ ಪರಿಚಯಿಸಲಾಗಿದೆ. ಹೀಗಾಗಿ ಸಂಗೀತ ದಿನದಿಂದ ದಿನಕ್ಕೆ ಹೊಸ ಹೊಸ ರೂಪವನ್ನು ತಾಳುತ್ತಾ ವಿಭಿನ್ನ ಶೈಲಿಗಳಲ್ಲಿ ಮುಂದುವರೆಯುತ್ತಿದೆ.

ಗುಲ್ಬರ್ಗಾ ಜಿಲ್ಲೆಯ ಸುತ್ತಮುತ್ತಲೂ ಅನೇಕ ಮಠ ಮಾನ್ಯಗಳಲ್ಲಿ ಸಂಗೀತದ ಕಾರ್ಯಕ್ರಮಗಳು ಏರ್ಪಡಿಸಿ ಸದಾ ಒಂದಿಲ್ಲೊಂದು ಕಾರ್ಯಕ್ರಮಗಳು ಜರುಗಿಸುತ್ತಲೇ ಇರುವುದು ಕಲಾವಿದರಿಗೆ ಮತ್ತು ಕಲೆಯ ಆರಾಧಕರಿಗೆ ಸುಸಂದರ್ಭವೇ ಸರಿ. ಹೀಗೆ ಭಜನೆ, ಕೀರ್ತನೆ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ತತ್ವಪದ ಹಾಡುಗಾರಿಕೆ ಮೇಲಿಂದ ಮೇಲೆ ಜನರಿಗೆ ಮುಟ್ಟುವ ರೀತಿಯಲ್ಲಿ ಕಲಾವಿದರಿಗೆ ವೇದಿಕೆಗಳು ಸಿಗುತ್ತವೆ. ಅಂತೆ ಕಲಾವಿದರು ತಮ್ಮ ಕಲೆಯನ್ನು ನಂಬಿಕೊಂಡು ಇವತ್ತು ಅದೆಷ್ಟೋ ಗಾಯಕರು ಸರ್ಕಾರಿ ನೌಕರಿ ಇಲ್ಲದೆ ತಮ್ಮ ಬದುಕನ್ನು ಸುಂದರವಾಗಿ ನಡೆಸುವಂತಾಗಿದೆ. ಇಂಥ ಭವ್ಯ ಪರಂಪರೆಯ ನಾಡಾದ ಗುಲ್ಬರ್ಗಾ ಅನೇಕ ಕಲಾವಿದರಿಗೆ ಜನ್ಮ ನೀಡಿದೆ. ಮತ್ತು ಹೊರಗಿನಿಂದ ಬಂದ ಗಾಯಕರಿಗೆ ಆಶ್ರಯ ತಾಣವಾಗಿದೆ.

ಸಂಗೀತ ಅನೇಕ ರೋಗಗಳನ್ನು ಗುಣಪಡಿಸುವ ನಿಟ್ಟಿನಲ್ಲಿ ಪ್ರಯೋಗಗಳು ನಡೆಯುತ್ತಿವೆ. ಅಲ್ಲದೆ ಸಸಿಗಳಿಗೆ ಸಣ್ಣದಾಗಿ ಸಂಗೀತ ಕೇಳಿಸುತ್ತಾ ಹೋದಂತೆ ಒಳ್ಳೆಯ ಫಲವನ್ನು ನೀಡುತ್ತಿವೆ. ಮಾನಸಿಕ ಖಿನ್ನತೆಗೆ ಒಳಗಾದವರಿಗೆ ದಿನದ ದೈನಂದಿನ ಕಾರ್ಯವನ್ನು ಮುಗಿಸಿ ಮನೆಗೆ ಬಂದಾಗ ಒಂದು ಒಳ್ಳೆಯ ಸಂಗೀತದ ಮನಸ್ಸಿಗೆ ಹಿತ ನೀಡಿದಲ್ಲದೆ ಶಾರೀರಿಕವಾಗಿಯೂ ಆರಾಮ ನೀಡುವಂತಾಗುತ್ತದೆ. ಶಿವನ ಸಾಕ್ಷಾತ್ಕಾರಕ್ಕೆ ಸಂಗೀತದ ಮಾರ್ಗವೇ ಶ್ರೇಷ್ಠವಾದ ಮಾರ್ಗವೆಂದು ಹೇಳುತ್ತಾರೆ. ಇನ್ನೊಂದು ಕಡೆ ಹನ್ನೆರಡನೆಯ ಶತಮಾನದ ವಚನಕಾರರು ತಮ್ಮ ವಚನಗಳಲ್ಲಿ "ಮಾತೆಂಬುದು ಜ್ಯೋತಿರ್ಲಿಂಗ ಸ್ವರವೆಂಬುದು ಪರತತ್ವವೆಂದು" ಸ್ವರಕ್ಕೆ ಪರಮಾತ್ಮನಿಗೆ ಹೋಲಿಸಿದ ಶರಣರ ವಚನಗಳು ಸ್ವರದ ಪರಾಕಾಷ್ಠೆಯನ್ನು ಎತ್ತಿ ತೋರಿಸಿದ್ದಾರೆ.

ಶರಣಬಸವೇಶ್ವರ ಸಂಸ್ಥಾನದಲ್ಲಿ ಪ್ರತಿ ಸೋಮವಾರ ಹಾಗೂ ಶ್ರಾವಣ ತಿಂಗಳಲ್ಲಿ ಒಂದು ತಿಂಗಳು ಸಂಗೀತ ಕಾರ್ಯಕ್ರಮ ಏರ್ಪಡಿಸುತ್ತಾರೆ. ಅಲ್ಲದೆ ದಸರಾ ದಿನಗಳಲ್ಲಿ ಜಾತ್ರಾ ಮಹೋತ್ಸವದಲ್ಲಿ ತಮ್ಮ ಸಂಸ್ಥಾನದ ಗಾಯಕರಿಂದ ಸಂಗೀತಕಾರ್ಯಕ್ರಮ ಉಣಬಡಿಸುತ್ತಾ ದಾಸೋಹದೊಂದಿಗೆ ಅಕ್ಷರ ದಾಸೋಹ ಸಂಗೀತದ ದಾಸೋಹಗೈಯುತ್ತಾ ದೇಶದ ಹೆಸರಾಂತ ಚಲನಚಿತ್ರ ಗಾಯಕ ಗಾನವಿಶಾರದೆ ಲತಾ ಮಂಗೇಶ್ಕರ ಅವರಿಂದ ಶ್ರೀ ಸುರೇಶ ವಾಡಕರ ಶ್ರೀಮತಿ ವಾಣಿ ಜಯರಾಮ ಹೀಗೆ ಅತ್ಯಂತ ಶ್ರೇಷ್ಠ ಗಾಯಕರಿಂದ ದಾಸೋಹ ಸೂತ್ರ ಹಾಡಿಸಿ ಗುಲ್ಬರ್ಗಾ ಜನರು ಏಳುತ್ತಲೇ ಇಂಥ ಮಹನೀಯರ ಸಂಗೀತ ಕೇಳುತ್ತಲೆ ಏಳುವಂಥ ಸಂಗೀತ ದಾಸೋಹಗೈಯುತ್ತಿರುವ ಡಾ.ಪೂಜ್ಯ

ಶರಣಬಸಪ್ಪ ಅಪ್ಪಾ ಅವರು ಸಂಗೀತಕ್ಕೆ ನೀಡಿದ, ನೀಡುತ್ತಿರುವ ಕೊಡುಗೆಯನ್ನು ಎಷ್ಟು ಬಣ್ಣಿಸಿದರೂ ಸಾಲದು. ಹಾಗೆ ಖಾಜಾ ಬಂದೇನವಾಜರ ಉರ್ಸ್ ಸಮಯದಲ್ಲಿ ಅನೇಕ ಸೂಫಿಗಾಯಕರ ಸಂಗೀತ ಸವಿಯುವಲ್ಲಿ ದರ್ಗಾದ ಜನಾಬ ಸಜ್ಜಾದ ಷಾ ಖುಸ್ರೊ ಅವರ ಕೊಡುಗೆ ಸ್ಮರಿಸಿಕೊಳ್ಳದಿದ್ದರೆ ತಪ್ಪಾದೀತು. ಹೀಗೆ ನಿರಂತರವಾಗಿ ಸಂಗೀತದ ರಸದೌತಣವನ್ನು ಶ್ರೀ ಶರಣಬಸವೇಶ್ವರ ಸಂಸ್ಥಾನದವರು ಖಾಜಾ ಬಂದೇನವಾಜ ದರ್ಗಾದವರು ಏರ್ಪಡಿಸುತ್ತಲೆ ಇರುತ್ತಾರೆ.

ನೂತನ ವಿದ್ಯಾಲಯ ಸಂಸ್ಥೆಯು ಸಂಗೀತಕ್ಕೆ ಅಪಾರ ಕೊಡುಗೆ ನೀಡಿದ್ದಲ್ಲದೆ ನಿರಂತರವಾಗಿ ಅವರು ನಾಡಿನ ಹಿರಿಯ ಕಲಾವಿದರನ್ನು ಗುಲ್ಬರ್ಗಾಕ್ಕೆ ಬರಮಾಡಿಕೊಂಡು ಅವರ ಗಾಯನ ಕಾರ್ಯಕ್ರಮ ಅಯೋಜೊಸಿದ್ದಾರೆ. ಹೀಗೆ ಆಕಾಶವಾಣಿ ಗುಲ್ಬರ್ಗಾ, ಸ್ವರಾಂಜಲಿ ಹರಿಸಿ ಧ್ವನಿ ನಾದಲಹರಿ ಟ್ರಸ್ಟ್‌ನವರು ಅನೇಕ ಹಿರಿಯ ಸಂಗೀತಗಾರರನ್ನು ಕರೆಸಿ ರಂಗಮಂದಿರದಲ್ಲಿ ಸಂಗೀತ ಕಾರಂಜಿಯನ್ನು ಏರ್ಪಡಿಸುತ್ತಾರೆ. ಶ್ರೀಮತಿ ಪರ್ವಿನ ಸುಲ್ತಾನ ಪಂ.ವೆಂಕಟೇಶ ಕುಮಾರ, ಡಾ.ಗಂಗೂಬಾಯಿ ಹಾನಗಲ್, ಪಂ.ಸಂಜಯ ಅಭ್ಯಂಕರ, ಪಂ.ಭಿಮಸೇನ ಜೋಷಿ, ವಿ.ಜಿ. ಜೋಗ, ಶ್ರೀಮತಿ ಕಿಶೋರಿ ಅಮೋನಕರ ಹೀಗೆ ಅನೇಕ ದಿಗ್ಗಜರ ಗಾಯನ ಕೇಳುವ ಸೌಭಾಗ್ಯ ನಮಗೆ ದೊರೆತಿದೆ. ಇಂಥ ಭವ್ಯ ಸಂಗೀತಕ್ಕೆ ಸಾಕ್ಷಿಯಾದ ಗುಲ್ಬರ್ಗಾ ಜಿಲ್ಲೆ ಕಲೆಯಿಂದ ಕಲಾವಿದರಿಂದ ಸಂಪದ್ಭರಿತವಾಗಿದೆ.